RNU AIR DHARWAD

# FEBRUARY 09, 2025
# AKASHAVANI - DHARWAD
# PRADESH SAMACHARA (KANNADA) 07.05 A.M.

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

## ಮುಖ್ಯಾಂಶಗಳು

<><><>

- ಪ್ರತಿ ಕ್ವಿಂಟಾಲ್ ತೊಗರಿಗೆ, ರಾಜ್ಯ ಸರ್ಕಾರದಿಂದ, 450 ರೂಪಾಯಿ ಪ್ರೋತ್ಸಾಹ ಧನ ಘೋಷಣೆ.
- ರಾಜ್ಯದ ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ, ಸಹಕಾರಿ ಸಂಘ ರಚಿಸಲು, ಸರ್ಕಾರದ ಚಿಂತನೆ.
- ‘ಗೇಮಿಂಗ್’ ಉದ್ಯಮ ಕೌಶಲಾಭಿವೃದ್ಧಿ ಮತ್ತು ಅಂತರ್ಜಾಲ ಶಿಷ್ಟಾಚಾರ ರಚನೆಗೆ, ಮಾಹಿತಿ ತಂತ್ರಜ್ಞಾನ ಇಲಾಖೆ, ಕ್ರಮ.
- ಮಲೈ ಮಹದೇಶ್ವರ ವನ್ಯಜೀವಿ ಧಾಮ; ಅಳಿವಿನಂಚಿನ 4 ವಿಶೇ ’ ಹಕ್ಕಿಗಳು ಸಮೀಕ್ಷೆಯಲ್ಲಿ ದಾಖಲು.

<><><>

## ಈಗ ವಾರ್ತೆಗಳ ವಿವರ

<><><>

ಪ್ರತಿ ಕ್ವಿಂಟಾಲ್ ತೊಗರಿಗೆ, ಕೇಂದ್ರದ 7 ಸಾವಿರದ 5 ನೂರಾ 50 ರೂಪಾಯಿ, ಕನಿಷ್ಟ ಬೆಂಬಲ ಬೆಲೆ ಜೊತೆಗೆ, ರಾಜ್ಯ ಸರ್ಕಾರದಿಂದ 450 ರೂಪಾಯಿ ಪ್ರೋತ್ಸಾಹ ಧನ ಘೋಷಿಸಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್ ಮಾಧ್ಯಮದಲ್ಲಿ ಈ ವಿಷಯ ಪ್ರಕಟಿಸಿದ್ದು, ಈಗಾಗಲೇ ಆರ್ಥಿಕ ಇಲಾಖೆ ಅನುಮೋದನೆ ನೀಡಿದ್ದು, ನಾಡಿನ ತೊಗರಿ ಬೆಳೆಗಾರರಿಗೆ ಇದರಿಂದ ಹೆಚ್ಚಿನ ಅನುಕೂಲವಾಗಲಿದೆ. ರಾಜ್ಯದ ರೈತರ ಹಿತಕಾಯಲು, ತಮ್ಮ ಸರ್ಕಾರ ಬದ್ಧವಾಗಿದೆ ಎಂದಿದ್ದಾರೆ.

<><><>

ರಾಜ್ಯದ ಪ್ರತಿ ಗ್ರಾಮ ಪಂಚಾಯ್ತಿ ಹಂತದಲ್ಲಿ, ಸಹಕಾರಿ ಸಂಘ ರಚಿಸುವ ಚಿಂತನೆ ಸರ್ಕಾರ ಹೊಂದಿದೆ; ಸಹಕಾರಿ ರಂಗದತ್ತ, ಯುವ ಜನರನ್ನು ಆಕರ್ಷಿಸಲು, ಪಠ್ಯದಲ್ಲಿ, ಸಹಕಾರ ಇಲಾಖೆಯ ಬಗ್ಗೆ ಮಾಹಿತಿ ಸೇರಿಸಲು, ಯೋಜಿಸಲಾಗಿದೆ ಎಂದು, ಸಹಕಾರ ಖಾತೆ ಸಚಿವ ಕೆ.ಎನ್ ರಾಜಣ್ಣ ತಿಳಿಸಿದ್ದಾರೆ. ಕೊಪ್ಪಳ ಜಿಲ್ಲೆ, ಯಲಬುರ್ಗಾದ ಕುಕನೂರು ಪಟ್ಟಣದಲ್ಲಿ ನಡೆದ, ಸಹಕಾರ ಜಾಗೃತಿ ಸಮಾವೇಶದಲ್ಲಿ ಪಾಲ್ಗೊಂಡು, ಅವರು, ಮಾತನಾಡಿದರು.

<><><>

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗೂ ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿ ಅಧ್ಯಕ್ಷತೆ ವಹಿಸಿದ್ದರು.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬೆಂಗಳೂರಿನ ತಮ್ಮ ಕಾವೇರಿ ನಿವಾಸದಲ್ಲಿ, 3ನೇ ದಿನವಾದ ನಿನ್ನೆ, ಬಜೆಟ್ ಪೂರ್ವಭಾವಿ ಸಭೆ ಮುಂದುವರೆಸಿದರು. ಉನ್ನತ ಶಿಕ್ಷಣ ಇಲಾಖೆ ಹಾಗೂ ಮುಜರಾಯಿ ಇಲಾಖೆ, ಸಾರಿಗೆ ಇಲಾಖೆ, ನಗರಾಭಿವೃದ್ಧಿ, ಪೌರಾಡಳಿತ, ಆರೋಗ್ಯ, ಮೀನುಗಾರಿಕೆ, ಗ್ರಾಮೀಣಾಭಿವೃದ್ಧಿ ಸೇರಿದಂತೆ, ಹಲವು ಇಲಾಖೆಗಳ ಸಚಿವರು ಹಾಗೂ ಅಧಿಕಾರಿಗಳೊಂದಿಗೆ, ಬಜೆಟ್ ಪೂರ್ವ ಸಮಾಲೋಚನೆ ನಡೆಸಿದರು.

<><><>

ಸಂಸದ ಪ್ರಲ್ಹಾದ ಜೋಶಿ ಅವರ, 6ನೇ ವರ್ಷದ ಸಾಂಸ್ಕೃತಿಕ ಮಹೋತ್ಸವದ ಅಂಗವಾಗಿ, ಅಂತಾರಾಷ್ಟ್ರೀಯ ಗಾಳಿಪಟ ಹಾಗೂ ಕುಸ್ತಿ ಪಂದ್ಯಾವಳಿ, ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು, ಕುಸುಗಲ್ ರಸ್ತೆಯ ಆಕ್ಸ್‌ಫರ್ಡ್ ಕಾಲೇಜು ಬಳಿಯ ಮೈದಾನದಲ್ಲಿ, ಇದೇ 20 ಹಾಗೂ 21 ರಂದು, ಎರಡು ದಿನಗಳ ಕಾಲ ಆಯೋಜಿತವಾಗಿದೆ. ಹುಬ್ಬಳ್ಳಿಯಲ್ಲಿ ಸುದ್ದಿಗೋಷ್ಠಿ ನಡೆಸಿದ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಮಹೋತ್ಸವದ ಕುರಿತು, ಮಾಹಿತಿ ನೀಡಿದರು.

<><><>

ಪ್ರಲ್ಹಾದ ಜೋಶಿ ಧ್ವನಿ 23 ಸೆಕೆಂದುಗಳು

<><><>

ಬೆಂಗಳೂರಿನಲ್ಲಿ ನಾಳೆಯಿಂದ, 14ರ ವರೆಗೆ ಏರ್ ಶೋ ನಡೆಯಲಿದೆ. ಈ ವೈಮಾನಿಕ ಪ್ರದರ್ಶನದಲ್ಲಿ, ಸ್ವದೇಶಿ ಹಾಗೂ ವಿದೇಶಿ ನಿರ್ಮಿತ ವಿಮಾನಗಳು, ಸಾಹಸ ಪ್ರದರ್ಶಿಸಲಿವೆ. ಏರ್ ಶೋ ಹಿನ್ನೆಲೆ, ಬೆಂಗಳೂರಿನ ಬಳ್ಳಾರಿ ರಸ್ತೆಯಲ್ಲಿ, ಭಾರಿ ವಾಹನ ಸಂಚಾರ ನಿ ೇಧಿಸಲಾಗಿದೆ. ಮುನ್ನೆಚ್ಚರಿಕೆ ಕ್ರಮವಾಗಿ, ಬೆಂಗಳೂರು ಉತ್ತರ ಹಾಗೂ ಯಲಹಂಕ ಸುತ್ತಲಿನ, 21 ಕೆರೆಗಳಲ್ಲಿ ಮೀನುಗಾರಿಕೆ ನಿ ೇಧಿಸಲಾಗಿದೆ.

<><><>

ಮೈಸೂರು ಜಿಲ್ಲೆ, ಟಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ, ನಾಳೆಯಿಂದ 13ನೇ ವ ್ಷದ ಕುಂಭ ಮೇಳ ಪ್ರಾರಂಭವಾಗಲಿದೆ. ಮೂರು ದಿನಗಳ ಈ ಕುಂಭಮೇಳಕ್ಕೆ, ಭರದ ಸಿದ್ಧತೆಗಳು ನಡೆದಿವೆ. ತ್ರಿವೇಣಿ ಸಂಗಮಕ್ಕೆ, ನಿರ್ಮಲಾನಂದನಾಥ ಸ್ವಾಮೀಜಿ ಭೇಟಿ ನೀಡಿ, ಪರಿಶೀಲಿಸಿದರು. ಲಕ್ಷಾಂತರ ಭಕ್ತರು ಕುಂಭ ಮೇಳಕ್ಕೆ ಆಗಮಿಸುತ್ತಿರುವ ಹಿನ್ನೆಲೆ, ಅಗತ್ಯ ಮೂಲ ಸೌಕರ್ಯ ಮತ್ತು ರಕ್ಷಣೆ ಒದಗಿಸುವಂತೆ, ಅಧಿಕಾರಿಗಳಿಗೆ ಸೂಚಿಸಿದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_dharwad ಹಾಗೂ

ನಮ್ಮ ಫೇಸ್ಬುಕ್ ಖಾತೆ Airrnu Dharwad ಅನುಸರಿಸಿ.

<><><>

‘ಗೇಮಿಂಗ್’ ಉದ್ಯಮಕ್ಕಾಗಿ ಕೌಶಲಾಭಿವೃದ್ಧಿ ಮತ್ತು ಅಂತರ್ಜಾಲ ಶಿಷ್ಟಾಚಾರ ರಚನೆಯ ಸಹಯೋಗಕ್ಕಾಗಿ, ‘ಗೇಮ್ ಡೆವಲಪರ್ ಅಸೋಸಿಯೇ ’ನ್ ಆಫ್ ಇಂಡಿಯಾ’ ಪ್ರತಿನಿಧಿಗಳೊಂದಿಗೆ, ಮಾಹಿತಿ ತಂತ್ರಜ್ಞಾನ ಖಾತೆ ಸಚಿವ ಪ್ರಿಯಾಂಕ ಖರ್ಗೆ, ಬೆಂಗಳೂರಿನಲ್ಲಿ ಮಹತ್ವದ ಚರ್ಚೆ ನಡೆಸಿದರು. ಇದೇ 28 ರಿಂದ, ಮಾರ್ಚ್ 1 ರ ವರೆಗೆ, ಬೆಂಗಳೂರಿನಲ್ಲಿ ಜಿಫೆಕ್ಸ್ ಸಮ್ಮೇಳನ ಆಯೋಜಿತವಾದ ಹಿನ್ನೆಲೆ, ಈ ಪೂರ್ವಭಾವಿ ಸಭೆ ಜರುಗಿತು. ಗೇಮಿಂಗ್ ಉದ್ಯಮ ಎದುರಿಸುತ್ತಿರುವ ಪ್ರಮುಖ ಸವಾಲುಗಳು ಹಾಗೂ ಆನ್ಲೈನ್ ಮನಿ ಗೇಮಿಂಗ್ ನಿಂದ, ವಿಡಿಯೋ ಗೇಮಿಂಗ್ ಅನ್ನು ಪ್ರತ್ಯೇಕಿಸುವ ಅಗತ್ಯತೆ, ಮತ್ತು ನಿಯಂತ್ರಣ ಹಾಗೂ ಪರಿಹಾರ ಕ್ರಮಗಳ ಕುರಿತು, ಅವರು ಸಮಾಲೋಚಿಸಿದರು.

<><><>

ಚಾಮರಾಜನಗರದ ಮಲೈ ಮಹದೇಶ್ವರ ವನ್ಯಜೀವಿ ಧಾಮದಲ್ಲಿ, ಒಟ್ಟು 253 ಪಕ್ಷಿ ಪ್ರಭೇದಗಳು ಹಾಗೂ ಅಳಿವಿನಂಚಿನಲ್ಲಿರುವ 4 ವಿಶೇ ’ ಹಕ್ಕಿಗಳು, ಸಮೀಕ್ಷೆ ವೇಳೆ ಕಂಡು ಬಂದಿವೆ ಎಂದು, ವನ್ಯಜೀವಿ ಧಾಮದ ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಕೆ. ಪರಮೇಶ ತಿಳಿಸಿದ್ದಾರೆ. 120 ಪರಿಣಿತ ಪರಿಸರ ಸ್ವಯಂಸೇವಕರನ್ನು ಆಯ್ಕೆ ಮಾಡಿ, ಧಾಮದ ವಿವಿಧ ವಲಯಗಳಲ್ಲಿ, ಎರಡು ದಿನಗಳ ಕಾಲ, ಪಕ್ಷಿಗಳ ಗಣತಿ ಕಾರ್ಯ ಕೈಗೊಳ್ಳಲಾಗಿದೆ. ವಿವಿಧ ರಾಜ್ಯಗಳಿಂದ, 500ಕ್ಕೂ ಹೆಚ್ಚು ಪಕ್ಷಿಪ್ರಿಯರು, ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಹೆಸರು ನೊಂದಾಯಿಸಿದ್ದರು.

<><><>

ಗದಗ ಜಿಲ್ಲೆ ರೋಣ ತಾಲೂಕು, ಕರ್ಕಿಕಟ್ಟಿ ಗ್ರಾಮದ, ಗಾಂಧಿವಾದಿ ಮುತ್ತಣ್ಣ ತೀರ್ಲಾಪುರ, ಇಂದಿನಿಂದ ಧಾರವಾಡ ಜಿಲ್ಲೆ ಹುಬ್ಬಳ್ಳಿ ತಾಲೂಕು ಕಿರೇಸೂರು ಗ್ರಾಮದಿಂದ, ‘ಜೈ ಜವಾನ್ ಜೈ ಕಿಸಾನ್’ ಧ್ಯೇಯದೊಂದಿಗೆ, ಅಯೋಧ್ಯೆ ವರೆಗೆ ಪಾದಯಾತ್ರೆ ಕೈಗೊಳ್ಳಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಮುತ್ತಣ್ಣ ತಿರ್ಲಾಪುರ ಮಾಹಿತಿ ನೀಡಿದ್ದಾರೆ.

<><><>

ಮುತ್ತಣ್ಣ ತಿರ್ಲಾಪುರ ಧ್ವನಿ 25 ಸೆಕೆಂದುಗಳು

<><><>

ಉತ್ತರಾಖಂಡ ರಾಜ್ಯದ, ಡೆಹ್ರಾಡೂನ್‌ನ ಹಲ್ದ್ವಾನಿಯಲ್ಲಿ ಆಯೋಜಿತ, 38ನೇ ರಾಷ್ಟ್ರೀಯ ಕ್ರೀಡಾಕೂಟದ, ಯೋಗಾಸನ ಸ್ಪರ್ಧೆಯಲ್ಲಿ, ಧಾರವಾಡ ಜಿಲ್ಲೆ, ಕುಂದಗೋಳ ತಾಲೂಕು, ಹರ್ಲಾಪುರ ಗ್ರಾಮದ, ಅನನ್ಯಾ ಸಾಂಬಯ್ಯ ಹಿರೇಮಠ ತೃತೀಯ ಸ್ಥಾನದೊಂದಿಗೆ, ಕಂಚಿನ ಪದಕ ಗಳಿಸಿದ್ದಾರೆ. ಗುಡಗೇರಿಯ ಸರ್ಕಾರಿ ಪ್ರಥಮ ದರ್ಜೆ ಪದವಿ ಮಹಾವಿದ್ಯಾಲಯದಲ್ಲಿ, ದ್ವಿತೀಯ ವರ್ಷದಲ್ಲಿ ಓದುತ್ತಿರುವ ಅನನ್ಯಾ, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಅನನ್ಯಾ ಹಿರೇಮಠ ಧ್ವನಿ 40 ಸೆಕೆಂದುಗಳು

<><><>

ವಾಯು ಸೇನೆ ವಾರಂಟ್ ಆಫಿಸರ್, ಜಿ.ಎಸ್. ಮಂಜುನಾಥ, ಆಗ್ರಾದ ಪ್ಯಾರಾ ಟ್ರೇನಿಂಗ್ ಸ್ಕೂಲ್‌ನಲ್ಲಿ, ಪ್ಯಾರಾ ಜಂಪಿಂಗ್ ತರಬೇತಿ ವೇಳೆ, ಪ್ಯಾರಾಶೂಟ್ ನಿಷ್ಕ್ರಿಯಗೊಂಡ ಪರಿಣಾಮ, 13 ಸಾವಿರ ಅಡಿಯಿಂದ ಬಿದ್ದು, ಮೃತಪಟ್ಟ ದುರ್ಘಟನೆ ವರದಿಯಾಗಿದೆ. ಶಿವಮೊಗ್ಗ ಜಿಲ್ಲೆ, ಹೊಸನಗರ ತಾಲೂಕು, ಪಟಗುಪ್ಪ ಬಳಿಯ ಸಂಕೂರಿನವರಾದ ಮಂಜುನಾಥ ಅವರಿಗೆ 36 ವರ್ಷ ವಯಸ್ಸಾಗಿತ್ತು. ಪ್ಯಾರಾ ಜಂಪಿಂಗ್ ತರಬೇತುದಾರರಾಗಿ ಅವರು ನಿಯುಕ್ತಿಗೊಂಡಿದ್ದರು. ಇಂದು ಪಾರ್ಥಿವ ಶರೀರದ ಅಂತ್ಯಕ್ರಿಯೆ ಸ್ವ ಗ್ರಾಮ ಸಂಕೂರಿನಲ್ಲಿ ನಡೆಯುವ, ಸಾಧ್ಯತೆ ಇದೆ ಎಂದು, ಕುಟುಂಬ ತಿಳಿಸಿದೆ.

<><><>

ಚಿಕ್ಕಮಗಳೂರು ಜಿಲ್ಲೆ, ಎನ್.ಆರ್.ಪುರ ತಾಲೂಕಿನ ಕತ್ತಲೆ ಕಾಡ್ ಬಳಿ, ಕಾಫಿ ಕೊಯ್ಲು ಮಾಡುತ್ತಿದ್ದ, ವಿಜಯನಗರ ಜಿಲ್ಲೆ, ಹರಪನಹಳ್ಳಿಯ ಕಾರ್ಮಿಕ ಮಹಿಳೆ, ವಿನೋದಾ ಅವರ ಮೇಲೆ, ಕಾಡಾನೆ ದಾಳಿ ಮಾಡಿದ್ದು, ಅವರು ಸ್ಥಳದಲ್ಲಿಯೇ ಮೃತಪಟ್ಟ ಘಟನೆ ನಡೆದಿದೆ. ಜಿಲ್ಲೆಯ ಅರೇನೂರು, ನೆರಡಿ, ಐದಳ್ಳಿ, ಬೆಟ್ಟದಹಳ್ಳಿ ಭಾಗಗಳಲ್ಲಿ ಕಾಡಾನೆಗಳು ಬೀಡು ಬಿಟ್ಟಿದ್ದು, ಅರಣ್ಯದತ್ತ ಓಡಿಸುವ ಕಾರ್ಯಾಚರಣೆ ಮುಂದುವರೆದಿದೆ. ಮೂಡಿಗೆರೆ, ಆಲ್ದೂರು ವಲಯಗಳಲ್ಲಿ, 45 ಕಿಲೋ ಮೀಟರ್ ರೈಲ್ವೆ ಕಂಬಿಗಳ ತಡೆಗೋಡೆ ಅಳವಡಿಸಲಾಗಿದೆ ಎಂದು, ಚಿಕ್ಕಮಗಳೂರು ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ರಮೇಶ್ ಬಾಬು ತಿಳಿಸಿದ್ದಾರೆ.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಆಯುಷ್ ಇಲಾಖೆ, ಬೆಂಗಳೂರಿನ ಯೋಗ ಗಂಗೋತ್ರಿ ಟ್ರಸ್ಟ್ ಸಹಯೋಗದಲ್ಲಿ, 'ರಥ ಸಪ್ತಮಿ' ಅಂಗವಾಗಿ, ವಿಧಾನಸೌಧದ ಮುಂಭಾಗದಲ್ಲಿ, ಇಂದು ಬೆಳಗ್ಗೆ 5 ಗಂಟೆಯಿಂದ ಆಯೋಜಿಸಿರುವ, ಸಾಮೂಹಿಕ ಯೋಗ ಕಾರ್ಯಕ್ರಮ, 9.30ರ ವರೆಗೆ ನಡೆಯಲಿದೆ.

<><><>

ಚಿತ್ರದುರ್ಗ ಹಾಗೂ ಬಳ್ಳಾರಿ ಜಿಲ್ಲೆಗಳ ವ್ಯಾಪ್ತಿಯ, ಸಂಡೂರಿನ ಅರಣ್ಯ ಪ್ರದೇಶವನ್ನು, ಅರಣ್ಯ ಖಾತೆ ಸಚಿವ ಈಶ್ವರ ಖಂಡ್ರೆ, ವೈಮಾನಿಕ ಸಮೀಕ್ಷೆ ನಡೆಸಿದರು.

<><><>

ಗದಗ ಜಿಲ್ಲೆ, ಗಜೇಂದ್ರಗಡ ತಾಲೂಕು, ಬೊಮ್ಮಸಾಗರದ ಶ್ರೀ ದುರ್ಗಾದೇವಿ ಜಾತ್ರೆ, ನಾಳೆಯಿಂದ 13ರ ವರೆಗೆ ಮಧ್ಯರಾತ್ರಿ ನಡೆಯಲಿದೆ. ಪ್ರಾಣಿ ಬಲಿ ನಿಷೇಧಿಸಲಾಗಿದೆ ಎಂದು, ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ತಿಳಿಸಿದ್ದಾರೆ.

<><><>

ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್, ಎಸ್. ರಾಜೇಂದ್ರಕುಮಾರ್, ಮಂಗಳೂರಿನ ಕುಪ್ಪೆ ಪದವಿನಲ್ಲಿ ನೂತನ ಉಪ ಅಂಚೆ ಕಚೇರಿ ಉದ್ಘಾಟಿಸಿದರು.

<><><>

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ, ಚಿತ್ರದುರ್ಗ ಜಿಲ್ಲಾ ಶಾಖೆ, ಶ್ರವಣ ನ್ಯೂನತೆಯುಳ್ಳ, 19 ಜನರಿಗೆ ಶ್ರವಣ ಸಾಧನ ಉಚಿತವಾಗಿ ವಿತರಿಸಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಪ್ರತಿ ಕ್ವಿಂಟಾಲ್ ತೊಗರಿಗೆ, ರಾಜ್ಯ ಸರ್ಕಾರದಿಂದ, 450 ರೂಪಾಯಿ ಪ್ರೋತ್ಸಾಹ ಧನ ಘೋಷಣೆ.
- ರಾಜ್ಯದ ಪ್ರತಿ ಗ್ರಾಮ ಪಂಚಾಯ್ತಿಯಲ್ಲಿ, ಸಹಕಾರಿ ಸಂಘ ರಚಿಸಲು, ಸರ್ಕಾರದ ಚಿಂತನೆ.

- ‘ಗೇಮಿಂಗ್’ ಉದ್ಯಮ ಕೌಶಲಾಭಿವೃದ್ಧಿ ಮತ್ತು ಅಂತರ್ಜಾಲ ಶಿಷ್ಟಾಚಾರ ರಚನೆಗೆ, ಮಾಹಿತಿ ತಂತ್ರಜ್ಞಾನ ಇಲಾಖೆ, ಕ್ರಮ.
- ಮಲೈ ಮಹದೇಶ್ವರ ವನ್ಯಜೀವಿ ಧಾಮ; ಅಳಿವಿನಂಚಿನ 4 ವಿಶೇ ’ ಹಕ್ಕಿಗಳು, ಸಮೀಕ್ಷೆಯಲ್ಲಿ ದಾಖಲು,

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>